# ಮಹಿಳಾ ಯಕ್ಷಗಾನದ ಸವಾಲುಗಳು ಮತ್ತು ಸಾಧ್ಯತೆ

**ಶುಭಾ ಮರವಂತೆ**

ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ.

**Received: 09/12/2024 ; Acepted:15/12/2024 ; Published: 09/01/2025**

**DOI: https://doi.org/10.5281/zenodo.14619490**

## ABSTRACT:

ಮಹಿಳೆಯರಿಗೆ ಹೊಂದುವ ಕಥಾ ಸಂವಿಧಾನ, ನವೀನ ತಂತ್ರ ಪರಿಕರಗಳನ್ನು ನಾವೇ ಕಂಡುಕೊಳ್ಳುದರ ಮೂಲಕ ಯಕ್ಷರಂಗದಲ್ಲೊಂದು ಮಹಿಳಾ ಲೋಕವನ್ನು ಸೃಷ್ಟಿಸುವ ಸವಾಲು ನಮ್ಮ ಮುಂದಿದೆ. ನಮ್ಮ ನಡೆಯಲ್ಲಿ ಅನನ್ಯತೆಯ ದಾರಿ ಗುರುತುಗಳು ಬೇಕಾಗಿವೆ. ಪ್ರಯೋಗಶೀಲ ಮನಸ್ಸು ಬೆಳೆದರೆ ಯಕ್ಷಗಾನದ ಏಕತಾನತೆಯನ್ನು ಮಹಿಳೆಯರು ಮುರಿದು ಮರು ಕಟ್ಟಲು ಸಾಧ್ಯವಿದೆ. ಮೊದಲು ಮಹಿಳೆಯರು ಯಕ್ಷಗಾನ ನೋಡುವುದೆ ಅಪರಾಧವೆಂದು ಭಾವಿಸುವ ಕಾಲಘಟ್ಟದಿಂದ ಬಹುದೂರ ಬಂದಿದ್ದೇವೆ. ಗಂಡಸೊಬ್ಬನೆ ಕಲಾವಿದನಾಗಿ ಅವನಷ್ಟಕ್ಕೆ ಇದ್ದು ಕುಟುಂಬದಿಂದ ದೂರ ಉಳಿದು ಬದುಕುತ್ತಿದ್ದ ಕಾಲ ಈಗ ಬದಲಾಗಿದೆ. ಹೆಣ್ಣು ಮಕ್ಕಳಿಂದಾಗಿ ಮನೆ ಮನೆಯು ಕಲಾ ಕುಟೀರವಾಗಿದೆ. ಮಹಿಳೆ ತಾನೂ ಕಲಾವಿದೆಯಾಗಿ ಮಕ್ಕಳನ್ನೂ ಆ ದೆಸೆಯಲ್ಲಿ ಪ್ರೋತ್ಸಾಹಿಸುತ್ತಾ ಕುಟುಂಬವನ್ನೆ ಆ ಕಡೆಗೆ ಚಲಿಸುವಂತೆ ಮಾಡುತ್ತಿರುವುದು ವಿಶ್ವಕಲೆಯ ಮರು ಚೇತನಕ್ಕೆ ನಾಂದಿ ಹಾಡಿದೆ. ಮೇಳ ಎಂಬ ಸಾಂಸ್ಥಿಕ ಸ್ವರೂಪಕ್ಕೆ ಪರ್ಯಾಯವಾಗಿ ಮಹಿಳೆಯರು ಯೋಚಿಸಬೇಕಾಗಿದೆ. ಇಂದು ಜಾತಿ ಧರ್ಮ ಮೀರಿ ಕಲಾವಿದೆಯರು ಹುಟ್ಟಿಕೊಳ್ಳುತ್ತಿದ್ದಾರೆ. ಆರ್ಷಿಯಾ ಎನ್ನುವ ಮಂಗಳೂರಿನ ಮುಸ್ಲಿಂ ಮಹಿಳೆ ವೇಷ ಕಟ್ಟುವುದನ್ನು ನೊಡಿದರೆ, ಮಕ್ಕಳು, ವಿಕಲಚೇತನರು ಪ್ರದರ್ಶನ ನೀಡುತ್ತಿರುವುದನ್ನು ನೋಡಿದರೆ ಯಕ್ಷಗಾನವು ಸಾಗುತ್ತಿರುವ ದಿಕ್ಕು ತೃಪ್ತಿ ತಂದಿದೆ. ಪ್ರಸಂಗ ರಚನೆ, ಹಿಮ್ಮೇಳ, ಮುಮ್ಮೇಳ, ಅಧ್ಯಯನ, ಸಂಶೋಧನೆ ಹೀಗೆ ಎಲ್ಲಾ ರೀತಿಯಲ್ಲೂ ಮಹಿಳೆಯರು ಸಾಧಿಸುತ್ತಿರುವ ಮುನ್ನಡೆ ಸ್ವಾಗತಾರ್ಹ ಬದಲಾವಣೆ. ಯಕ್ಷಗಾನ ಮಹಿಳೆಯರಿಗೆ ಕೊಟ್ಟ ಅವಕಾಶ ದೊಡ್ಡದು. ಎಷ್ಟೋ ಬಾರಿ ಕಲಾವಿದ ತಾನು ನಿಜ ಜೀವನದಲ್ಲಿ ಸಾಧಿಸಲಾರದ್ದನ್ನು ಕಲೆಯ ಮೂಲಕ ಸಾಧಿಸುತ್ತಾನೆ. ಲಿಂಗಾತೀತ ದೇಹ ಮನಸ್ಸನ್ನು ಸಾಧಿಸಲು ಮಹಿಳೆ ಅಪೇಕ್ಷಿಸುವುದು ಸಹಜವಾದ ಪ್ರಕ್ರಿಯೆ. ಕಲಾವಿದೆಯರಿಗೆ ಇಲ್ಲಿ ಅದು ಸಾಧ್ಯವಾಗಿದೆ.

## KEYWORDS:

ಯಕ್ಷಗಾನ, ಮಹಿಳೆ, ಕಲಾವಿದೆ, ಪ್ರಸಂಗ, ಮಹಿಳಾ ಚೌಕಿ.

ಕನ್ನಡದ ಕಲಾ ಜಗತ್ತು ಮಹಿಳೆಯರಿಂದ ಶ್ರೀಮಂತವಾಗಿದೆ. ಸಂಗೀತ, ಸಾಹಿತ್ಯ, ಭರತನಾಟ್ಯ, ಯಕ್ಷಗಾನ ಹೀಗೆ ಹಲವು ಕ್ಷೇತ್ರಗಳನ್ನು ಮಹಿಳೆ ತನ್ನ ವಿಶಿಷ್ಠ ಕೌಶಲ ಹಾಗೂ ಸಹಜ ಕಲಾ ಸಂಪನ್ನತೆಯಿಂದ ಸೃಜನಶೀಲವಾಗಿಸಿದ್ದಾಳೆ. ಮಹಿಳೆ ಎಂದರೆ ಎಚ್ಚರ. ಕಾಲದ ಜಾಗೃತ ಪ್ರಜ್ಞೆ. ಅದು ಸೂಕ್ಷ್ಮ ಮತ್ತು ನಾವಿನ್ಯ. ಯಾವುದೆ ಕೆಲಸ ಮಾಡಿದರೂ ಅದರಲ್ಲಿ ಶ್ರದ್ಧೆ ಮತ್ತು ಸಂಯಮವನ್ನು ಕಾಯ್ದುಕೊಳ್ಳುವುದು ಅವರ ಹುಟ್ಟು ಗುಣ. ಹಾಗಾಗಿ ಹೆಣ್ಣು ಮಕ್ಕಳಿಗೆ ನಮ್ಮ ಸಂಸ್ಕೃತಿಯಲ್ಲಿ ವಿಶೇಷ ಆದರ ಅಭಿಮಾನವಿರುವುದನ್ನು ಕಾಣುತ್ತೇವೆ. ಇಂದು ಎಲ್ಲಾ ಕ್ಷೇತ್ರಗಳಲ್ಲಿ ವಿಶೇಷ ಛಾಪು ಮೂಡಿಸುತ್ತಿರುವ ಮಹಿಳೆಯರು ಯಕ್ಷಗಾನದಲ್ಲೂ ತನ್ನ ಹಿರಿಮೆಯನ್ನು ಸಾಧಿಸಿಕೊಂಡಿರುವುದು ಶ್ಲಾಘನೀಯ ಸಂಗತಿ.

ಯಕ್ಷ ಪ್ರಪಂಚಕ್ಕೆ ಮಹಿಳೆಯರು ಪ್ರವೇಶ ಮಾಡಿರುವುದೆ ಒಂದು ರೋಚಕ ಅಧ್ಯಾಯ. ಗಂಡಸರಿಗೆ ಮಾತ್ರ ಮೀಸಲಾಗಿದ್ದ ಕ್ಷೇತ್ರವನ್ನು ಮಹಿಳೆಯರು ಪ್ರಸಂಗ ರಚನೆಯ ಮಾಡುವುದರ ಮೂಲಕ ಪ್ರವೇಶಿಸಿದರು. ಕಿಬ್ಬಚ್ಚಲ ಮಂಜಮ್ಮ (1830–1900), ಕೊಲ್ಲೂರು ಮಹಾಲಕ್ಷ್ಮಿ ಜೋಯಿಸ (1909–1977) ಮೊದಲಾದವರು ಈಗ ತಿಳಿದ ಮಟ್ಟಿಗೆ ಮೊದಲ ಮಹಿಳಾ ಪ್ರಸಂಗಕರ್ತರು. ಮಂಜಮ್ಮನವರು ಯುದ್ಧ ಯಕ್ಷಗಾನ ಛಂದಸ್ಸನ್ನು ಬಳಸಿ ದೇವರ ನಾಮ ರಚಿಸುತ್ತಿದ್ದರು. “ಜೀವ ಪರಮರ ಕಲ್ಯಾಣ', 'ಮನೋ ಬುದ್ಧಿ ಸಂವಾದ' ಎನ್ನುವ ಎರಡು ಪ್ರಸಂಗಗಳನ್ನು ರಚಿಸಿದ್ದಾರೆ. 'ಯಕ್ಷಲೋಕ ವಿಜಯ' ಎನ್ನವ ಇನ್ನೊಂದು ಪ್ರಸಂಗವೂ ಇವರ ಹೆಸರಿನಲ್ಲದೆ. ಕೊಲ್ಲೂರು ಮಹಾಲಕ್ಷ್ಮಿ ಜೋಯಿಸ ಅವರು 'ಭೋಜ ಕಾಳಿದಾಸ, ಗರುಡೋದ್ಭವ, ಕನ್ನಿಕಾ ಮಹಾತ್ಮೆ' ಎಂಬ ಮೂರು ಪ್ರಸಂಗಗಳನ್ನು ಬರೆದಿದ್ದಾರೆ. ಆಧ್ಯಾತ್ಮವನ್ನೆ ಪ್ರಧಾನ ವಿಷಯವನ್ನಾಗಿ ನಿರೂಪಿಸುವ ಈ ಪ್ರಸಂಗಗಳು ಪ್ರಯೋಗಶೀಲ ಮನಸ್ಸನ್ನು ಹೋದಿರುವುದು ವಿಶೇಷ. ಪ್ರಸಂಗ ಸಾಹಿತ್ಯ ಯಾವಾಗಲೂ ತೆರೆಯ ಹಿಂದಿನ ಸಾಮಗ್ರಿ. ಅದನ್ನು ತೆರೆಯ ಮುಂದೆ ಪ್ರಸ್ತುತ ಪಡಿಸಬೇಕಾದವನು ಕಲಾವಿದ. ಈ ಕಾರಣಕ್ಕಾಗಿ ಮಹಿಳೆಯರು ತೆರೆಯ ಮುಂದೆ ಕಾಣಿಸಿಕೊಳ್ಳಲಾರಂಭಿಸಿದ್ದು ಕಳೆದ ಶತಮಾನದ ನಡುವಿನಲ್ಲಿ. ಅದು ಯಕ್ಷ ನಿರ್ದೇಶಕ–ಭಾಗವತನ ಪಾತ್ರದಲ್ಲಿ. ಭಾಗವತ ಇಡೀ ಪ್ರದರ್ಶನದ ಸೂತ್ರಧಾರಿ. ತಾಳ ಹಿಡಿದು ಎಂತಹ ಕಲಾವಿದನನ್ನೂ ಕುಣಿಸುವ ಚಾಕಚಕ್ಯತೆ ಭಾಗವತನಿಗಿರಬೇಕು. ಶ್ರೀಮತಿ ಲೀಲಾವತಿ ಬೈಪಡಿತ್ತಾಯರು ಮೊದಲ ಬಾರಿ ತಾಳ ಹಿಡಿದು ರಂಗ ಪ್ರವೇಶಿಸಿದಾಗ ಇಡಿ ಯಕ್ಷ ಜಗತ್ತು ಒಮ್ಮೆ ತಿರುಗಿ ನೋಡಿತು. ಎಲ್ಲಾ ಗಂಡು ಭಾಗವತರಂತೆ ಮೊಟ್ಟಮೊದಲ ಬಾರಿಗೆ ಪತಿಯೊಂದಿಗೆ ಮೇಳದ ತಿರುಗಾಟಕ್ಕೆ ಹೊರಟ ಲೀಲಮ್ಮನವರದ್ದು ಸಾಧನೆಯ ಬದುಕು. ಅವರು ತಮ್ಮ ಆತ್ಮಕಥೆ “ಯಕ್ಷ ಲೀಲಾವಳಿ”ಯಲ್ಲಿ ಅಂದಿನ ಅನುಭವವನ್ನು ಬಿಚ್ಚಿಟ್ಟಿದ್ದಾರೆ. ಊರೂರು ತಿರುಗುವ ನಾರಿ ಭಾಗವತರು ಅಂದಿನ ಯಕ್ಷಗಾನದ ವಿಶೇಷ

ಆಕರ್ಷಣೆಯಾದರೂ ಧ್ವನಿ ಭಾರದಲ್ಲಿ ತಾರಕದಲ್ಲಿ ಹಾಡುವ ಸಾಮರ್ಥ್ಯ ಕರ್ನಾಟಕ ಸಂಗೀತದ ಹಿನ್ನಲೆಯಿಂದ ಬಂದ ಲೀಲಾವತಿ ಅಮ್ಮನವರಿಗೆ ರೂಢಿಯಾಗಿರುವುದು ಸತತ ಪರಿಶ್ರಮದಿಂದ. ಹಗಲು ನಿದ್ದೆ, ರಾತ್ರಿ ಎಚ್ಚರ, ಮಕ್ಕಳ ಲಾಲನೆ ಪಾಲನೆ, ತಿಂಗಳ ರಜೆ, ಯಾರದೋ ಮನೆಯನ್ನು ಮಲಗಲು ಆಶ್ರಯಿಸಬೇಕಾದ ಅನಿವಾರ್ಯತೆ ಗಂಡಸರಿಗಿದ್ದಷ್ಟು ಸುಲಭದ ದಾರಿಯಾಗಿರಲಿಲ್ಲ. ಅದರಲ್ಲೂ ವೃತ್ತಿಯಾಗಿ ಸ್ವೀಕರಿಸುವುದು. ತೆರೆಯ ಹಿಂದೆ ಕುಳಿತು ಇಡಿ ಪ್ರಸಂಗ ನಿರ್ವಹಣೆಯ ರೀತಿಗೆ ಹಿರಿಯ ಕಲಾವಿದರೂ ಮೆಚ್ಚುಗೆಯ ಮಳೆಗರೆದ್ದು ಲೀಲಾವತಿ ಅಮ್ಮನ ಶತಮಾನಗಳ ಸಾಧನೆ. ಮುಂದಿನ ದಾರಿ ನಮಗೆಲ್ಲರಿಗೂ ತಿಳಿದಿರುವಂತೆ. ಪಾತ್ರಧಾರಿಗಳಾಗಿ ಮಹಿಳೆಯರ ಪ್ರವೇಶ. ಏಕ ಕಾಲದಲ್ಲಿ ಹಲವು ಕಲಾವಿದೆಯರು ಹವ್ಯಾಸಿ ಕಲಾವಿದೆಯರಾಗಿ ರಂಗದಲ್ಲಿ ಕಾಣಿಸಿಕೊಂಡಿದ್ದು ಮಹಿಳೆಯರ ಪ್ರವೇಶದ ಮೂರನೆ ಹೆಜ್ಜೆ. ಹಿರಿಯ ಕಲಾವಿದೆ ವೇಷಗಾರ್ತಿ ಅಕ್ಕಮ್ಮಣ್ಣಿ, ಮೂಕಾಂಬಿಕಾ ವಾರಂಬಳ್ಳಿ (ಬ್ಯಾಂಕ್ ಉದ್ಯೋಗಿ), ಪೂರ್ಣಿಮಾ ಯತೀಶ್ ರೈ, ವಿದ್ಯಾ ಕೋಳ್ಯೂರು ಮೊದಲಾದವರಿಂದ ಹೊಸ ತಲೆಮಾರಿನ ಹಲವು ಕಲಾವಿದೆಯರು ಇದಕ್ಕೆ ಸಾಕ್ಷಿ. ಚಂಡೆ, ಮೃದಂಗ ವಾದಕರಾಗಿ, ತಾಳ ಮದ್ದಲೆಯ ಅರ್ಥಧಾರಿಗಳಾಗಿ, ಯಕ್ಷ ತಂಡ ಕಟ್ಟಿ ಪುರುಷ ವೇಷ, ಸ್ತ್ರೀವೇಷ, ಬಣ್ಣದ ವೇಷಗಳವರೆಗೆ ಕಲಾವಿದೆಯರ ಪಯಣ ಬಹುಮುಖಿಯಾದ್ದು. 1985-90ರ ಸುಮಾರಿಗೆ ವಿದ್ಯಾವಂತ ಮಹಿಳೆಯರು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಾ, ಅತಿಥಿ ಕಲಾವಿದೆಯಾಗಿಯೂ, ತಂಡ ಕಟ್ಟಿಯೂ ತಮ್ಮ ಸಾಮರ್ಥ್ಯ ಪ್ರದರ್ಶಿಸುವುದಕ್ಕೆ ಪ್ರಾರಂಬಿಸಿದರು. 1985-90 ರಲ್ಲಿ ಶ್ರೀ ಮಹಾ ಗಣಪತಿ ಕಾಟಿಪಳ್ಳ ಎಂಬ ಪೂರ್ಣ ಪ್ರಮಾಣದ ಮೇಳದ ತಂಡ ಇತ್ತು. ದೇಶ ವಿದೇಶಗಳಲ್ಲೂ ತನ್ನ ಅಸ್ಮಿತೆಯನ್ನು ಕಂಡುಕೊಂಡ ಮಹಿಳೆಯರು ಸಾಧಿಸಿದ್ದು ಬಹಳಷ್ಟು: ಸಾಧಿಸ ಬೇಕಾದುದು ಇನ್ನಷ್ಟು.

ಯಕ್ಷಗಾನದ ಸಾಂಸ್ಥಿಕ ಸಂರಚನೆ ಗಂಡು ದೃಷ್ಟಿಯಿಂದ ರೂಪುಗೊಂಡದ್ದು. ಇಲ್ಲಿಯ ವಾಚಿಕ, ಆಂಗಿಕ, ಆಹಾರ್ಯ ಎಲ್ಲವೂ ಪುರುಷ ಕಲ್ಪಿತ, ಪುರುಷ ಪ್ರಧಾನ. ಈ ಭದ್ರ ಕೋಟೆಯೊಳಗೆ ಹೆಣ್ಣು ಪ್ರವೇಶಿಸುವುದಕ್ಕೆ ಹಲವು ತೊಡಕುಗಳಿದ್ದವು. ಈಗ ಅದನ್ನು ನಮ್ಮ ಕಲಾವಿದೆಯರು ಮೀರಿದ್ದಾರೆ. ಆದರೆ ಸಂಪೂರ್ಣವಾಗಿ ಮೀರಲು ಸಾಧ್ಯವಾಗಿದೆಯೇ ಎಂಬುದು ಪ್ರಶ್ನೆ. ಇದಕ್ಕೆ ಸ್ತ್ರೀ ದೇಹ ರಚನೆಯೂ ಕಾರಣ. ರಂಗಸ್ಥಳ-ಚೌಕಿ ಎಂಬ ಎರಡು ಸಂರಚನೆಗಳು ಹೆಣ್ಣಿಗೆ ಒಡ್ಡುವ ಸವಾಲು ಹಲವು. ಇಂದಿಗೂ ಯಕ್ಷಗಾನ ಕಲೆಯನ್ನು ಆರಾಧನಾ ಸಂಪ್ರದಾಯವಾಗಿ, ಬೆಳಕಿನ ಸೇವೆ, ಹರಕೆ ಎಂಬ ಪರಿಕಲ್ಪನೆಯಲ್ಲಿ ಸ್ವೀಕರಿಸುತ್ತಿರುವ ಸಂದರ್ಭದಲ್ಲಿ ಧಾರ್ಮಿಕ ಪರಿಭಾವನೆಯೆ ನಮ್ಮನ್ನು ಹೆಚ್ಚು ಆವರಿಸಿಕೊಂಡಿದೆ. ಮಹಿಳೆ ತನ್ನ ಮಾಸಿಕ ಋತು ಸ್ರಾವದ ಸಂದರ್ಭದಲ್ಲಿ ಹೆಣ್ಣಿಗೆ ಪ್ರವೇಶವು ನಿರಾಕರಿಸಲ್ಪಟ್ಟಿದೆ. ಈ ಕಾರಣಕ್ಕಾಗಿ

ಎಷ್ಟೋ ಕಲಾವಿದೆಯರು ಯಕ್ಷರಂಗದ ಈ ಸಾಂಸ್ಥಿಕ, ಧಾರ್ಮಿಕ ಚೌಕಟ್ಟನ್ನು ಮೀರಲು ಇಚ್ಚಿಸುವುದಿಲ್ಲ. ಧರ್ಮ ದೇವರು ನಮ್ಮ ನಂಬಿಕೆ ಆಚರಣೆಗೆ ಬಿಟ್ಟಿದ್ದು, ಅದನ್ನು ಮನಸ್ಸಿನಿಂದ ಮೀರಿ ನಿಸರ್ಗದ ನೀತಿ ಎಂಬ ಸಾಮಾನ್ಯ ನೆಲೆಗೆ ತಂದುಕೊಂಡು ಸಹಜವಾಗಿ ವರ್ತಿಸುವ ಮಹಿಳೆಯರು ರೂಪುಗೊಳ್ಳುವವರೆಗೆ ಈ ತೊಡಕು ನಮ್ಮನ್ನು ಬಿಡುವುದಿಲ್ಲ. ಇಲ್ಲವೆ ಆ ಭಾವನೆಗಳನ್ನು ಹಾಗೆಯೆ ಉಳಿಸಿಕೊಂಡು ಥಿಯೇಟರ್ ಪರಿಕಲ್ಪನೆಗೆ ರಂಗವನ್ನು ಮಹಿಳೆಯರು ಬದಲಿಸಿಕೊಂಡು ಪಾತ್ರ ನಿರ್ವಹಿಸಬೇಕಾಗುತ್ತದೆ. ಈ ಹಿನ್ನಲೆಯಲ್ಲಿ "ಮಹಿಳಾ ಚೌಕಿ" ಅನಿವಾರ್ಯ. ಈ ಎರಡೂ ಸಾಧ್ಯತೆಗಳು ಮಹಿಳೆಯ ಕ್ಷಮತೆಯನ್ನು ಹೆಚ್ಚಿಸಬೇಕು. ಮಹಿಳೆಯರು ವೇಷ ಭೂಷಣ ಕಟ್ಟಿಕೊಳ್ಳುವಾಗಲೂ ಮುಖವರ್ಣಿಕೆಯ ನಿರ್ವಹಣೆಯಲ್ಲೂ ಪುರುಷರನ್ನೆ ಆಶ್ರಯಿಸುವುದು ಕೆಲವರಿಗೆ ಕಷ್ಟವೆನಿಸಿದೆ. ಅದಕ್ಕಾಗಿ ಭಾರವಾದ ಭುಜಕೀರ್ತಿ, ಕೇದಗೆ ಮುಂದಲೆ ಮೊದಲಾದ ಸಾಧನ ಸಾಮಗ್ರಿಗಳನ್ನು ಕಟ್ಟುವುದು ಬಹಳಷ್ಟು ಹೊತ್ತು ಧರಿಸುವುದು ಕಷ್ಟ ಸಾಧ್ಯ ಎನ್ನುವ ಕಾರಣಕ್ಕಾಗಿ ಈಗ ಸುಲಭದ ಹಗುರದ ಪರ್ಯಾಯ ಸಾಮಗ್ರಿಗಳು ಬಂದಿವೆ. ಇದು ಸ್ತ್ರೀ ಪರವಾಗಿ ಯಕ್ಷರಂಗವು ಬದಲಾಗುವುದರ ಸೂಚನೆ. ಆದರೂ ಹೆಣ್ಣು ಮಕ್ಕಳಿಗೆ ಗಂಡು ಕೇಕೆ, ಗಂಡು ಲಾಲಿ, ಗಂಡುಡಿಗೆಗಳು ತ್ರಾಸದಾಯಕ ಎನ್ನುವುದು ಕೆಲವರ ಅಭಿಪ್ರಾಯ.

ಇಂದಿನ ಬಹುತೇಕ ಕಲಾವಿದೆಯರು ದಿಡೀರನೆ ಪ್ರಚಾರಕ್ಕೆ ಬಂದವರು. ಒಂದೆರಡು ಪಾತ್ರ ಮಾಡಿದ ತಕ್ಷಣ ಇಂದಿನ ಸಾಮಾಜಿಕ ಜಾಲತಾಣಗಳಿಂದ ವ್ಯಾಪಕ ಪ್ರಚಾರ ಗಿಟ್ಟಿಕೊಳ್ಳುವ ಇವರಿಗೆ ಯಕ್ಷಗಾನದ ಪೂರ್ವರಂಗದ ಪರಿಚಯ ಅಷ್ಟಾಗಿ ಇರುವುದಿಲ್ಲ. ಶಾಲಾ ಕಾಲೇಜುಗಳಲ್ಲಿ ಕುಣಿತ ಅಭ್ಯಾಸ ಮಾಡಿ ಒಮ್ಮಲೆ ರಂಗ ಪ್ರವೇಶ ಮಾಡುವ ಇವರಿಗೆ ಸೂಕ್ತ ತರಬೇತಿ ನೀಡುವ ಅವಶ್ಯಕತೆಯಿದೆ. ಹೆಣ್ಣು ಮಕ್ಕಳಿಗೆ ತರಬೇತಿ ನೀಡುವ ಯಕ್ಷಗುರುಗಳಲ್ಲಿ ವರ್ಷಾನುಗಟ್ಟಲೆ ತರಬೇತಿ ಪಡೆಯಲು ಯಾರಿಗೆ ಸಮಯವಿದೆ? ಮಾರ್ಥಾ ಯಾಸ್ಟಿನ್ ನಂತವರು ವಿದೇಶದಿಂದ ಬಂದು ಉಡುಪಿ ಕೇಂದ್ರದಲ್ಲಿ ನಿಂತು ಕಲಿತು, ಸಂಶೋಧನೆ ನಡೆಸಿದ್ದನ್ನು ನೆನಪಿಸಿಕೊಂಡರೆ ನಮ್ಮ ಕಲಾವಿದೆಯರಲ್ಲೂ ಈ ಬಗೆಯ ಸಮರ್ಪಣಾ ಭಾವನೆ ಅಪೇಕ್ಷಣೀಯವೆನಿಸುತ್ತದೆ. ಪ್ರಚಾರ ಪ್ರಿಯತೆಯ ಸೋಗಿನಿಂದ ಹೊರಬಂದು ನಿಜವಾದ ಅರ್ಥದಲ್ಲಿ ಕಲೆಯಲ್ಲಿ ಉಳಿದು ಕೊಳ್ಳುವ ಗಟ್ಟಿ ಕಲಾವಿದೆಯರಿಂದ ಏನಾದರೂ ನಿರೀಕ್ಷಿಸಲು ಸಾಧ್ಯ. ಮದುವೆ, ಮನೆ, ಮಕ್ಕಳು ಇಲ್ಲಿಯೇ ಕಳೆದು ಹೋಗುವ ಹೆಣ್ಣು ಮಕ್ಕಳಿಗೆ ಆತ್ಮಸ್ಥೈರ್ಯ ತುಂಬಿ ಮತ್ತೆ ಕಲಾರಂಗಕ್ಕೆ ಕರೆತರುವ ಸಂಘಟನಾತ್ಮಕ ವೇದಿಕೆಯೊಂದು ಹೆಣ್ಣು ಮಕ್ಕಳಿಗೆ ಅನಿವಾರ್ಯ. ಸಾಮರ್ಥ್ಯವಿದೆ; ವ್ಯವಸ್ಥೆ ಇಲ್ಲ ಎನ್ನುವ ಪರಿಸ್ಥಿತಿ ಬರಬಾರದಲ್ಲವೆ?

ರಂಗದ ಮೇಲೆ ಅಭಿನಯಿಸುವ ಪ್ರತಿಯೊಬ್ಬ ಕಲಾವಿದೆಗೂ ಹಲವು

ಸವಾಲುಗಳು ಎದುರಾಗುತ್ತವೆ. ಭಾಗವತರ ಸ್ವರ ಭಾರಕ್ಕೆ ಶ್ರುತಿ ಸೇರಿಸಲಾರದ ಕಲಾವಿದೆಯರು ಮಾತಿನಲ್ಲಿ ಎಷ್ಟೋ ಬಾರಿ ಸೋತು ಬಿಡುತ್ತಾರೆ. ರಂಗ ಮಂಚದ ಮೇಲೆ ಕುಣಿದು ಆರ್ಭಟಿಸುವ ಮಹಿಳೆಯರು ಅರ್ಥಗಾರಿಕೆ ಬಂದಾಗ ತುಸು ಕುಸಿಯುವುದು ಸಾಮಾನ್ಯ. ಇದಕ್ಕಾಗಿ ಮಹಿಳಾ ಭಾಗವತರೆ ಹಾಡಿದರೆ ಸಮಸ್ಯೆ ಪರಿಹಾರವಾಗಬಹುದು ಎನ್ನುವುದು ತಜ್ಞರ ನಿಲುವು. ನಮ್ಮಲ್ಲಿ ಹೆಚ್ಚು ಅಪಾಯ ತರುತ್ತಿರುವುದು ಅನುಕರಣೆ. ಹೆಣ್ಣು ಗಂಡಾಗಬೇಕೆನ್ನುವುದು; ಗಂಡು ವೇಷಧಾರಿಗಳು ಸ್ತ್ರೀಪಾತ್ರಗಳ ಮೂಲಕ ಹೆಣ್ಣಾಗ ಬಯಸುವುದು. ಇವೆರಡೂ ಕಲಾ ಸಂವಹನಕ್ಕೆ ಅಪಾಯಕಾರಿಯೆ. ಕಲಾವಿದೆಯರನ್ನು ಕಲಾವಿದೆಯರನ್ನಾಗಿಯೂ, ಕಲಾವಿದರನ್ನು ಕಲಾವಿದರಾಗಿಯೂ ನೋಡುವುದು ನಮಗೆ ಸಾಧ್ಯವಾಗಬೇಕು. ಒಮ್ಮೆ ಧರ್ಮಸ್ಥಳದ ಶ್ರೀಮತಿ ಹೇಮಾವತಿ ಅಮ್ಮನವರು ಒಬ್ಬ ಸ್ತ್ರೀವೇಷ ಕಲಾವಿದ ರಂಗದಲ್ಲಿ ಹೆಣ್ಣಿನ ಹಾಗೆ ವರ್ತಿಸುವುದನ್ನು ನೋಡಿ ಮುಜುಗರಪಟ್ಟು ಸಂಬಂಧಿಸಿದವರಿಗೆ “ನೀವು ಸ್ತ್ರೀವೇಷ ಹಾಕಿ ಸಾಕು, ಸ್ತ್ರೀಯಾಗಲು ಹೋಗಬೇಡಿ” ಎಂದು ಹೇಳಿದರಂತೆ. ಹೆಂಗಸರಂತೆ ಬ್ರಾ ಧರಿಸಿ ಅದೂ ಕಾಣುವ ಹಾಗೆ ತೆಳ್ಳನೆ ರವಿಕೆ ಧರಿಸಿ ಬರುವುದು ಎಷ್ಟೋ ಬಾರಿ ಸ್ತ್ರೀ ಪೇಕ್ಷಕರಿಗೆ ಮುಜುಗರ ತರುವುದರಲ್ಲಿ ಸಂದೇಹವಿಲ್ಲ. ಮೊದಲು ಕಪ್ಪು ಕೆಂಪು ಎರಡೆ ರವಿಕೆ ಧರಿಸುತ್ತಿದ್ದು ಈಗ ಬಣ್ಣದ ಜಗತ್ತು ಸೀರೆ ರವಿಕೆಯಲ್ಲಿ ತುಂಬಿಕೊಂಡಿದೆ. ಸ್ತ್ರೀ ಪುರುಷ ಪಾತ್ರಗಳು ಪರಸ್ಪರ ಮುಟ್ಟದೆ ಅಭಿಸಯಿಸುತ್ತಿದ್ದ ಕಾಲ ಬದಲಾಗಿ ಈಗ ಸಿನಿಮೀಯ ದೃಶ್ಯ ವೈಭವಗಳು ರಂಜಿಸುತ್ತಿವೆ. ಸಿನಿಮಾದ ಹಾಗೆ ಸ್ತ್ರೀಯರು ಸ್ತ್ರೀ ಪಾತ್ರವನ್ನೂ, ಪರುಷರು ಪುರುಷ ಪಾತ್ರವನ್ನೂ ಯಕ್ಷಗಾನದಲ್ಲಿ ತಂದು ನಡೆಸಿದ ಪ್ರಯೋಗ ಕಲಾ ವಿಮರ್ಶಕರ ತೀವ್ರ ಟೀಕೆಗೂ ಗುರಿಯಾಯಿತು. ಭಸ್ಮಾಸುರ–ಮೋಹಿನಿಯರಾಗಿ ಅಭಿನಯಿಸುವಾಗ ಕಲಾವಿದ ಕಲಾವಿದೆಯರಿಗೂ ತುಸು ಕಷ್ಟವೇ ಆಯಿತು. ಹಾಗಾಗಿ ಕಲೆಯನ್ನು ಅದರ ಇತಿಮಿತಿಯಲ್ಲಿ ಸಹಜವಾಗಿ ನೋಡುವ ದೃಷ್ಟಿಯೊಂದು ಪ್ರೇಕ್ಷಕರಲ್ಲಿ ರೂಪುಗೊಳ್ಳುವಂತಾಗಬೇಕು. ಕಲಾವಿದೆಯರ ಪಾತ್ರ ನಿರ್ವಹಣೆಯನ್ನು ಮಹಿಳಾ ಪ್ರಜ್ಞೆಯಿಂದಲೇ ನೋಡುವ ಕ್ರಮ ನಮ್ಮ ನಡುವೆ ರೂಢಿಯಾಗುವುದು ಅವಶ್ಯಕ.

ಮಹಿಳೆಯರಿಗೆ ಹೊಂದುವ ಕಥಾ ಸಂವಿಧಾನ, ನವೀನ ತಂತ್ರ ಪರಿಕರಗಳನ್ನು ನಾವೇ ಕಂಡುಕೊಳ್ಳುದರ ಮೂಲಕ ಯಕ್ಷರಂಗದಲ್ಲೊಂದು ಮಹಿಳಾ ಲೋಕವನ್ನು ಸೃಷ್ಟಿಸುವ ಸವಾಲು ನಮ್ಮ ಮುಂದಿದೆ. ನಮ್ಮ ನಡೆಯಲ್ಲಿ ಅನನ್ಯತೆಯ ದಾರಿ ಗುರುತುಗಳು ಬೇಕಾಗಿವೆ. ಪ್ರಯೋಗಶೀಲ ಮನಸ್ಸು ಬೆಳೆದರೆ ಯಕ್ಷಗಾನದ ಏಕತಾನತೆಯನ್ನು ಮಹಿಳೆಯರು ಮುರಿದು ಮರು ಕಟ್ಟಲು ಸಾಧ್ಯವಿದೆ. ಮೊದಲು ಮಹಿಳೆಯರು ಯಕ್ಷಗಾನ ನೋಡುವುದೆ ಅಪರಾಧವೆಂದು ಭಾವಿಸುವ ಕಾಲಘಟ್ಟದಿಂದ ಬಹುದೂರ ಬಂದಿದ್ದೇವೆ. ಗಂಡಸೊಬ್ಬನೆ ಕಲಾವಿದನಾಗಿ ಅವನಷ್ಟಕ್ಕೆ ಇದ್ದು

ಕುಟುಂಬದಿಂದ ದೂರ ಉಳಿದು ಬದುಕುತ್ತಿದ್ದ ಕಾಲ ಈಗ ಬದಲಾಗಿದೆ. ಹೆಣ್ಣು ಮಕ್ಕಳಿಂದಾಗಿ ಮನೆ ಮನೆಯು ಕಲಾ ಕುಟೀರವಾಗಿದೆ. ಮಹಿಳೆ ತಾನೂ ಕಲಾವಿದೆಯಾಗಿ ಮಕ್ಕಳನ್ನೂ ಆ ದೆಸೆಯಲ್ಲಿ ಪ್ರೋತ್ಸಾಹಿಸುತ್ತಾ ಕುಟುಂಬವನ್ನೆ ಆ ಕಡೆಗೆ ಚಲಿಸುವಂತೆ ಮಾಡುತ್ತಿರುವುದು ವಿಶ್ವಕಲೆಯ ಮರು ಚೇತನಕ್ಕೆ ನಾಂದಿ ಹಾಡಿದೆ. ಮೇಳ ಎಂಬ ಸಾಂಸ್ಥಿಕ ಸ್ವರೂಪಕ್ಕೆ ಪರ್ಯಾಯವಾಗಿ ಮಹಿಳೆಯರು ಯೋಚಿಸಬೇಕಾಗಿದೆ. ಇಂದು ಜಾತಿ ಧರ್ಮ ಮೀರಿ ಕಲಾವಿದೆಯರು ಹುಟ್ಟಿಕೊಳ್ಳುತ್ತಿದ್ದಾರೆ. ಆರ್ಷಿಯಾ ಎನ್ನುವ ಮಂಗಳೂರಿನ ಮುಸ್ಲಿಂ ಮಹಿಳೆ ವೇಷ ಕಟ್ಟುವುದನ್ನು ನೊಡಿದರೆ, ಮಕ್ಕಳು, ವಿಕಲಚೇತನರು ಪ್ರದರ್ಶನ ನೀಡುತ್ತಿರುವುದನ್ನು ನೋಡಿದರೆ ಯಕ್ಷಗಾನವು ಸಾಗುತ್ತಿರುವ ದಿಕ್ಕು ತೃಪ್ತಿ ತಂದಿದೆ. ಪ್ರಸಂಗ ರಚನೆ, ಹಿಮ್ಮೇಳ, ಮುಮ್ಮೇಳ, ಅಧ್ಯಯನ, ಸಂಶೋಧನೆ ಹೀಗೆ ಎಲ್ಲಾ ರೀತಿಯಲ್ಲೂ ಮಹಿಳೆಯರು ಸಾಧಿಸುತ್ತಿರುವ ಮುನ್ನಡೆ ಸ್ವಾಗತಾರ್ಹ ಬದಲಾವಣೆ. ಯಕ್ಷಗಾನ ಮಹಿಳೆಯರಿಗೆ ಕೊಟ್ಟ ಅವಕಾಶ ದೊಡ್ಡದು. ಎಷ್ಟೋ ಬಾರಿ ಕಲಾವಿದ ತಾನು ನಿಜ ಜೀವನದಲ್ಲಿ ಸಾಧಿಸಲಾರದ್ದನ್ನು ಕಲೆಯ ಮೂಲಕ ಸಾಧಿಸುತ್ತಾನೆ. ಲಿಂಗಾತೀತ ದೇಹ ಮನಸ್ಸನ್ನು ಸಾಧಿಸಲು ಮಹಿಳೆ ಅಪೇಕ್ಷಿಸುವುದು ಸಹಜವಾದ ಪ್ರಕ್ರಿಯೆ. ಕಲಾವಿದೆಯರಿಗೆ ಇಲ್ಲಿ ಅದು ಸಾಧ್ಯವಾಗಿದೆ. ದೇಹ ಮತ್ತು ಮನಸ್ಸನ್ನು ಸದಾ ಮುದುಡಿ ಮುದ್ದೆಯಾಗಿಸುವ ಸ್ತ್ರೀಲೋಕ ಯಕ್ಷ ಸಂಸರ್ಗದಲ್ಲಿ ಹೆಚ್ಚು ಮುಕ್ತ ಸಂವಹನಕ್ಕೆ ತೆರೆದುಕೊಂಡಿದೆ. ಪಾತ್ರಗಳು ನಾವಾಗುವ ಮೂಲಕ ಸಾಧಿಸುವುದು ಇದನ್ನೆ ಅಲ್ಲವೆ?

**ಪರಾಮರ್ಶನ ಗ್ರಂಥಗಳು:**

1. ಕಬ್ಬಿನಾಲೆ ವಸಂತ ಭಾರದ್ವಾಜ, (2021), ಯಕ್ಷಗಾನ ಕವಿ ಕಾವ್ಯ ವಿಚಾರ, ಯಜ್ಞಲಕ್ಷ್ಮಿ ಪ್ರಕಾಶನ, ಮೈಸೂರು.
2. ಕಬ್ಬಿನಾಲೆ ವಸಂತ ಭಾರದ್ವಾಜ, (2013), ಕರ್ನಾಟಕ ಯಕ್ಷಗಾನ ಕವಿಚರಿತೆ, ಯಕ್ಷಗಾನ ಕೇಂದ್ರ, ಉಡುಪಿ.
3. ಮೋಹನ ಕುಂಟಾರ್, (2000), ಯಕ್ಷಗಾನ ವಾಚಿಕಾಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಭಟ್ ಸಾಗರ ಜಿ.ಎಸ್., (1994), ಯಕ್ಷಗಾನದ ಯುಗಪುರುಷ: ಕೆರೆಮನೆ ಶಿವರಾಮ ಹೆಗಡೆ, ನಿಧಿ ಪ್ರಕಾಶನ, ಸಾಗರ.
5. ಕೇಶವ ಶರ್ಮ, (2004), ತೆಂಕುತಿಟ್ಟು ಯಕ್ಷಗಾನದ ಮುಖವರ್ಣಿಕೆ, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.